# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 303

ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 11.12.2024

ಉತ್ತರಿಸುವ ಸಚಿವರು : ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಕ್ಫ್ ಸಂಸ್ಥೆ ಸರ್ಕಾರದ ಅಧೀನದ ಸಂಸ್ಥೆಯೇ; ವಕ್ಫ್ ಸಂಸ್ಥೆ ಮೇಲೆ ಕೇಂದ್ರ/ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಗಳೇನು: | ಹೌದು, ವಕ್ಫ್ ಕಾಯ್ದೆ 1954 ಕೇಂದ್ರ ಸರ್ಕಾರ ದಿಂದ ರಚಿತವಾದ ಕಾಯ್ದೆಯಾಗಿದ್ದು, ದಿನಾಂಕ:21-05-1954 ರಂದು ದೇಶದಾದ್ಯಂತ ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆಯನ್ವಯ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು 1961ರಲ್ಲಿ ಕರ್ನಾಟಕ ರಾಜ್ಯದ ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಲ್ಪಟ್ಟಿರುತ್ತದೆ.<br><br>ವಕ್ಫ್ ಕಾಯ್ದೆ 1995ರ ಕಲಂ 96 ರಂತೆ **ಕೇಂದ್ರ ಸರ್ಕಾರವು** ಈ ಕೆಳಕಂಡ ಅಧಿಕಾರಗಳನ್ನು ಹೊಂದಿದೆ:<br>1) ವಕ್ಫನ ಜಾತ್ಯಾತೀತ ಚಟುವಟಿಕೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸಕಾರವು ಈ ಕೆಳಕಂಡ ಅಧಿಕಾರ ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು:<br>**(ಅ)** ವಕ್ಫನ ಜಾತ್ಯಾತೀತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಕ್ಫ್ ಆಡಳಿತ ನಡೆಸಲು ಮೂಲ ತತ್ವ ಮತ್ತು ನೀತಿಗಳನ್ನು ರೂಪಿಸುವುದು.<br>**(ಆ)** ಮಂಡಳಿ ಮತ್ತು ಕೇಂದ್ರ ವಕ್ಫ್ ಪರಿಷತ್ತಿನ ಜಾತ್ಯಾತೀತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅವುಗಳೊಂದಿಗೆ ಸಮನ್ವಯ ಏರ್ಪಡಿಸುವುದು.<br>**(ಇ)** ವಕ್ಫನ ಜಾತ್ಯಾತೀತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಅದರ ಆಡಳಿತದ ಪರಿಶೀಲನೆ ಮತ್ತು ಅದರ ಸುಧಾರಣೆಗೆ ಯಾವುದಾದರೂ ಸಲಹೆ ಇದ್ದಲ್ಲಿ ನೀಡುವುದು.<br>ಉಪ ಪ್ರಕರಣ (1) ರಲ್ಲಿನ ಅಧಿಕಾರಗಳನ್ನು ಚಲಾಯಿಸುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಯಾವುದೇ ನಿಯತಕಾಲಿಕ ಅಥವಾ ಇತರ ವರದಿಗಳನ್ನು ಯಾವುದೇ ಮಂಡಳಿಯಿಂದ ಕೇಳಬಹುದು ಮತ್ತು ತನ್ನ ವಿವೇಚನೆಗೆ ಒಳಪಟ್ಟಂತೆ ಮಂಡಳಿಗೆ ನಿರ್ದೇಶನಗಳನ್ನು ನೀಡಬಹುದು ಮತ್ತು ಮಂಡಳಿಯು ಅಂತಹ ನಿರ್ದೇಶನಗಳನ್ನು ಪಾಲಿಸತಕ್ಕದ್ದು.<br>**ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಗಳು:-**<br>➢ ವಕ್ಫ್ ಬೋರ್ಡ್ ನಿರ್ವಹಿಸುವ ಚಟುವಟಿಕೆಗಳಲ್ಲಿ ಸರ್ಕಾರವು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ ವಕ್ಫ್ ಮಂಡಳಿಯು ತನ್ನ ಅಧಿಕಾರಗಳು ಮತ್ತು ಕಾರ್ಯಗಳನ್ನು ಚಲಾಯಿಸುವಾಗ ತೆಗೆದುಕೊಂಡ ಯಾವುದೇ ಆದೇಶಗಳು / ಸರಿಯಾದ ಕ್ರಮಗಳ, ಕಾನೂನುಬದ್ಧತೆ ಮತ್ತು ಔಚಿತ್ಯತೆಯನ್ನು ನಿಗಾವಹಿಸುತ್ತದೆ.<br>➢ ವಕ್ಫ್ ಮಂಡಳಿಯ ಕಾರ್ಯಗಳ ನಿರ್ವಹಣೆಯಲ್ಲಿ ಸೂಕ್ತವೆಂದು ಭಾವಿಸಬಹುದಾದಂತಹ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ನು ಸರ್ಕಾರವು ನೀಡುತ್ತದೆ.<br>➢ ರಾಜ್ಯ ಸರ್ಕಾರವು ವಕ್ಫ್ ಕಾಯ್ದೆ 1995 ರ ಕಲಂ 23 ರಂತೆ ಮಂಡಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ನೇಮಕ ಮಾಡುವ ಅಧಿಕಾರ ಹೊಂದಿದೆ |

| | | |
|---|---|---|
| | | ➢ ರಾಜ್ಯ ಸರ್ಕಾರವು ವಕ್ಫ್ ಕಾಯ್ದೆ 1995 ರ ಕಲಂ 14 ರಂತೆ ಮಂಡಳಿಯನ್ನು ರಚಿಸುವ ಅಧಿಕಾರ ಹೊಂದಿದೆ.<br>➢ ರಾಜ್ಯ ಸರ್ಕಾರವು ವಕ್ಫ್ ಕಾಯ್ದೆ 1995 ರ ಕಲಂ 83 ರಂತೆ ವಕ್ಫ್ ಟ್ರಿಬ್ಯೂನಲ್‌ಗಳನ್ನು ಸ್ಥಾಪಿಸುವ ಅಧಿಕಾರ ಹೊಂದಿದೆ.<br>➢ ಸರ್ಕಾರವು ಮಂಡಳಿಯು ರಾಜ್ಯ ಲೆಕ್ಕಪತ್ರ ಇಲಾಖೆ ಮತ್ತು ಸಿ.ಜಿ.ಎ. ನಡೆಸುವ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸುವಲ್ಲಿ ಪಾತ್ರವನ್ನು ವಹಿಸುತ್ತದೆ. |
| ಆ) | ರಾಜ್ಯದಲ್ಲಿ ವಕ್ಫ್ ಸಂಸ್ಥೆ ಹೊಂದಿರುವ ಆಸ್ತಿಗಳು ಎಷ್ಟು; ಈ ಆಸ್ತಿಗಳಿಂದ ಪ್ರತೀ ವರ್ಷ ಬರುತ್ತಿರುವ ಆದಾಯ ಎಷ್ಟು; ಈ ಆದಾಯವನ್ನು ಯಾವ ಉದ್ದೇಶಕ್ಕೆ ವಿನಿಯೋಗಿಸಿಕೊಂಡು ಬರಲಾಗಿದೆ: (ಜಿಲ್ಲಾವಾರು ವಿವರ ನೀಡುವುದು) | ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಮಸೀದಿಗಳು, ದರ್ಗಾ, ಖಬರಸ್ತಾನ್, ಆಶುರ್‌ಖಾನಾ ಈದ್ಗಾ ಹಾಗೂ ಇತರೇ ಆಸ್ತಿಗಳು ಸೇರಿದಂತೆ ಒಟ್ಟು 47,629 ನೋಂದಾಯಿತ ವಕ್ಫ್ ಆಸ್ತಿಗಳನ್ನು ಹೊಂದಿದೆ. ಈ ವಕ್ಫ್ ಆಸ್ತಿಗಳ ಒಟ್ಟು ವಾರ್ಷಿಕ ಆದಾಯದ ಶೇ.7% ರಷ್ಟು ವಕ್ಫ್ ವಂತಿಗೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಬರುತ್ತದೆ. ಈ ಆದಾಯದ ಪೈಕಿ ಶೇ. 1% ರಷ್ಟು ಕೇಂದ್ರ ವಕ್ಫ್ ಪರಿಷತ್ತಿಗೆ ನೀಡಲಾಗುತ್ತಿದ್ದು ಉಳಿದ ಶೇ.6% ರಷ್ಟು ವಂತಿಗೆಯನ್ನು ವಕ್ಫ್ ಕಾಯ್ದೆ 1995 ಕಲಂ 77 ರಂತೆ ಮಂಡಳಿಯ ಖರ್ಚು ವೆಚ್ಚಗಳಿಗೆ ವಿನಿಯೋಗಿಸಿ ಕೊಳ್ಳಲಾಗುತ್ತಿದೆ. |
| ಇ) | ವಕ್ಫ್ ಕಾಯ್ದೆ ಜಾರಿಗೆ ಬಂದಿದ್ದು ಯಾವಾಗ; ವಕ್ಫ್ ಆಸ್ತಿ ಎಂದರೇನು; ಈ ಆಸ್ತಿಗಳು ವಕ್ಫ್ ಸಂಸ್ಥೆಗೆ ಯಾವ ರೂಪದಲ್ಲಿ ಬಂದಿದೆ; (ದಾನ, ಗ್ರಾಂಟ್, ಖರೀದಿ ಅಥವಾ ಇತರೆ ಮೂಲಗಳ ವಿವರ ನೀಡುವುದು) | ವಕ್ಫ್ ಕಾಯ್ದೆ 1954 ಕೇಂದ್ರ ಸರ್ಕಾರ ದಿಂದ ರಚಿತವಾದ ಕಾಯ್ದೆಯಾಗಿದ್ದು ದಿನಾಂಕ: 21-05-1954 ರಂದು ದೇಶಾದ್ಯಂತ ಜಾರಿಗೆ ಬಂದಿರುತ್ತದೆ.<br>ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು ಶಾಶ್ವತವಾದ ಸಮರ್ಪಣೆ ಹಾಗೂ ಯಾವುದೇ ಉದ್ದೇಶಕ್ಕಾಗಿ ಸ್ಥಿರ ಮತ್ತು ಚಿರಾಸ್ತಿಯನ್ನು ಮುಸ್ಲಿಂ ಕಾನೂನಿನಿಂದ ಗುರುತಿಸಲ್ಪಟ್ಟಂತಹ ಧಾರ್ಮಿಕ ದತ್ತಿಗಾಗಿ ನೀಡಿರುವ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಪರಿಗಣಿಸಲಾಗುವುದು.<br>ಈ ಆಸ್ತಿಗಳು ಸ್ವತಂತ್ರ ಪೂರ್ವದಿಂದ ಇನಾಂ, ದಾನ ಹಾಗೂ ಗ್ರಾಂಟ್ ರೂಪದಲ್ಲಿ ಮತ್ತು ತಲೆತಲಾಂತರದಿಂದ (ಮಸೀದಿ, ದರ್ಗಾ, ಖಬರಸ್ತಾನ್, ಆಶೂರಖಾನಾ, ಮುಸಾಫಿರ್‌ಖಾನಾ ಅನಾಥಾಶ್ರಮ ಮತ್ತು ಇತರೆ ಧಾರ್ಮಿಕ್ ಸ್ಥಳಗಳು) ವಕ್ಫ್ ಆಗಿ ಬಳಕೆಯಲ್ಲಿ ಬಹು ಹಿಂದಿನಿಂದ ರೂಢಿಗತವಾಗಿ ವಕ್ಫ್ ಆಸ್ತಿಗಳಾಗಿರುತ್ತವೆ. (ಮಾಹಿತಿಯನ್ನು Pen drive ಮುಖಾಂತರ ನೀಡಲಾಗಿದೆ.) |
| ಈ) | ಕಳೆದ 2 ವರ್ಷದಿಂದ ವಕ್ಫ್ ಮಂಡಳಿ ಎಂದು ನಮೂದಿಸಿರುವ ಆಸ್ತಿಗಳೆಷ್ಟು: ಈ ಪೈಕಿ ಎಷ್ಟು ಆಸ್ತಿಗಳನ್ನು ವಕ್ಫ್ ತನ್ನ ವಶಕ್ಕೆ ಪಡೆದಿದೆ: ವಶಕ್ಕೆ ಪಡೆಯಲು ನೋಟಿಸ್ ನೀಡಿರುವ ಪ್ರಕರಣಗಳೆಷ್ಟು: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುವ ಮತ್ತು ನೇರವಾಗಿ ವಕ್ಫ್ ಮಂಡಳಿಯಲ್ಲಿ ನೋಂದಾಯಿಸಲ್ಪಡುವ ವಕ್ಫ್ ಆಸ್ತಿಗಳ ವಿವರ ವಕ್ಫ್ ಮಂಡಳಿಯಲ್ಲಿ ಲಭ್ಯವಿದೆ. ಈ ಆಸ್ತಿಗಳ ದಾಖಲೆಗಳು ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳ ಅಧೀನದಲ್ಲಿವೆ.<br>ಮುಂದುವರೆದು, ವಕ್ಫ್ ಮಂಡಳಿ ವತಿಯಿಂದ ಯಾವುದೇ ನೋಟೀಸನ್ನು ಜಾರಿಮಾಡಲಾಗುವುದಿಲ್ಲ. |

| | | |
|---|---|---|
| ಉ) | ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ವಕ್ಫ್ ಆಸ್ತಿ ಎಷ್ಟು? (ಆಸ್ತಿಯ ವಿವರವನ್ನು ತಾಲ್ಲೂಕುವಾರು ನೀಡುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ವಕ್ಫ್ ಆಸ್ತಿಯ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ: |

| ಕ್ರ. ಸಂ. | ತಾಲ್ಲೂಕಿನ ಹೆಸರು | ವಕ್ಫ್ ಆಸ್ತಿಗಳ ಸಂಖ್ಯೆ | ತಾಲ್ಲೂಕುವಾರು ಒಟ್ಟು ವಿಸ್ತೀರ್ಣ | | |
|---|---|---|---|---|---|
| | | | **ಎಕರೆ** | **ಗುಂಟೆ** | **ಚ.ಅ.** |
| 1 | ಚಿಕ್ಕಮಗಳೂರು | 182 | 84 | 1055 | 796562.15 |
| 2 | ತರಿಕೇರೆ | 82 | 75 | 464 | 331051.36 |
| 3 | ಅಜ್ಜಂಪೂರ | 29 | 9 | 87 | 87141 |
| 4 | ಕಡೂರ್ | 77 | 64 | 347 | 360595.5 |
| 5 | ಮುಡಿಗೇರೆ | 73 | 26 | 392 | 126518.86 |
| 6 | ಕಳಸ | 9 | 12 | 104 | 0 |
| 7 | ಎನ್.ಆರ್.ಪುರಾ | 32 | 19 | 200 | 134979 |
| 8 | ಶೃಂಗೇರಿ | 10 | 1 | 84 | 15500 |
| 9 | ಕೊಪ್ಪ | 46 | 21 | 136 | 124222.75 |
| **ಒಟ್ಟು ಆಸ್ತಿಗಳು & ವಿಸ್ತೀರ್ಣ** | | **540** | **311** | **2869** | **1976570.62** |
| **ಒಟ್ಟು ವಿಸ್ತೀರ್ಣ** | | | **382** | **29** | **1976570.62** |

**ಸಂಖ್ಯೆ: MWD-LMQ/218/2024**

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು